ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಸವದತ್ತಿ ತಾಲ್ಲೂಕು ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಹೆಚ್ಚಿನ ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶ ಇರುವುದಿಲ್ಲ

1067 (1120) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006ರ ಸೆಪ್ಟೆಂಬರ್ ತಿಂಗಳಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯವು ನಡೆಸಿದ ಎಂ ಡಿ ಎಸ್ ಪರೀಕ್ಷೆಯಲ್ಲಿ ಶೇಕಡಾ 20ಕ್ಕೂ ಕಡಿಮೆ ಪ್ರಮಾಣದಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗಿರುವುದು ನಿಜವೆ,

ಆ) ಸದರಿ ಪರೀಕ್ಷೆಯ ಪೆರಿಯೋಡಾಂಟಿಕ್ಸ್ ವಿಭಾಗದ ಮೌಲ್ಯಮಾಪನದಲ್ಲಿನ ತಾಂತ್ರಿಕ ದೋಷಗಳಿಂದ ಹಾಗೂ ಸಂಭವನೀಯ ಅಚಾತುರ್ಯಗಳಿಂದಾಗಿ ಪ್ರತಿಭಾವಂತ ವಿದ್ಯಾರ್ಥಿಗಳು ತೇರ್ಗಡೆ ಹೊಂದದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ವಿಶ್ವವಿದ್ಯಾಲಯದ ಸದರಿ ಪರೀಕ್ಷೆಯ ದಾಖಲೆಯಲ್ಲಿಯೇ ಕನಿಷ್ಟ ಮಟ್ಟದ ಫಲಿತಾಂಶ ಇದಾಗಿರುವುದರಿಂದ ವಿದ್ಯಾರ್ಥಿಗಳಿಗುಂಟಾದ ಅನ್ಯಾಯವನ್ನು ಪರಿಹರಿಸಲು ಕನಿಷ್ಟ ಹೆಚ್ಚುವರಿಯಾಗಿ ಐದು ಕೃಪಾಂಕಗಳನ್ನು ನೀಡಲು ಸರ್ಕಾರ ಕ್ರಮ ಜರುಗಿಸುವುದೇ,

ಈ) ಈ ಪರೀಕ್ಷೆಯ ಐದನೇ ಮೌಲ್ಯಮಾಪನದಲ್ಲಿ ಅಂಕಗಳು ತುಂಬ ಕಡಿಮೆಯಾಗಲು ಕಾರಣಗಳೇನು,

ಉ) ಹಾಗಿದ್ದಲ್ಲಿ, ಮೌಲ್ಯಮಾಪನದಲ್ಲಿನ ಸಂಭವನೀಯ ಲೋಪ ದೋಷಗಳನ್ನು ಸರಿಪಡಿಸಿ ವಿದ್ಯಾರ್ಥಿಗಳಿಗೆ ನ್ಯಾಯವೊದಗಿಸುವಲ್ಲಿ ಸರ್ಕಾರ ಮುಂದಾಗುವುದೇ, ಇಂಥ ಮಹತ್ವದ ಪರೀಕ್ಷೆಗಳ ಮೌಲ್ಯಮಾಪನದ ಸುವ್ಯವಸ್ಥೆಗಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಾ॰ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) –ಇಲ್ಲ–

ಆ) –ಇಲ್ಲ–

ಇ) ಉದ್ಭವಿಸುವುದಿಲ್ಲ

ಈ) ಕಡಿಮೆ ಅಂಕಗಳನ್ನು ನೀಡಲಾಗಿರುವುದಿಲ್ಲ

ಉ) ಉದ್ಭವಿಸುವುದಿಲ್ಲ

1068 (1275) ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಡಾ ನಂಜುಂಡಪ್ಪ ವರದಿ ಪ್ರಕಾರ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಪಶುಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗುವುದೇ,

ಆ) ಹಾಗಿದ್ದಲ್ಲಿ, ಹೊಸ ಪಶುಚಿಕಿತ್ಸಾಲಯ ತೆರೆಯಲು ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಎಷ್ಟು ಪ್ರಸ್ತಾವನೆಗಳು ಬಂದಿವೆ (ಹೆಸರುಗಳನ್ನು ನೀಡಿ)

ಇ) ಯಾವಾಗ ಮತ್ತು ಎಷ್ಟು ಕೇಂದ್ರಗಳನ್ನು ಚಿತ್ತಾಪುರ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಮಂಜೂರು ಮಾಡಲಾಗುವುದು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಡಾ ನಂಜುಂಡಪ್ಪ ರವರ ಪ್ರಾದೇಶಿಕ ಅಸಮತೋಲನಾ ನಿವಾರಣಾ ವರದಿ ಪ್ರಕಾರ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳನ್ನೊಳಗೊಂಡಂತೆ ಯಾವ ತಾಲ್ಲೂಕುಗಳಲ್ಲಿ ಪ್ರತೀ 5000 ಜಾನುವಾರುಗಳಿಗೆ ಒಂದು ಪಶುಚಿಕಿತ್ಸಾಲಯ ಇಲ್ಲವೋ ಅಂತಹ ತಾಲ್ಲೂಕುಗಳಲ್ಲಿ ಮಾತ್ರ ಹೊಸ ಪಶುಚಿಕಿತ್ಸಾಲಯ ತೆರೆಯಲು ಕ್ರಮ ಜರುಗಿಸಲಾಗುತ್ತಿದೆ ಇದು 8 ವರ್ಷಗಳ ಅವಧಿಯ ಕಾರ್ಯಕ್ರಮವಾಗಿರುತ್ತದೆ

ಆ) ಹೊಸ ಪಶುಚಿಕಿತ್ಸಾಲಯಗಳನ್ನು ತೆರೆಯಲು ಸೇಡಂ ತಾಲ್ಲೂಕಿನ 5 ಗ್ರಾಮಗಳಿಗೆ ಮತ್ತು ಚಿತ್ತಾಪುರ ತಾಲ್ಲೂಕಿನ 10 ಗ್ರಾಮಗಳಿಗೆ ಪ್ರಸ್ತಾವನೆಗಳು ಬಂದಿವೆ ಅವುಗಳ ವಿವರ ಈ ಕೆಳಗೆ ನೀಡಿದೆ

ಸೇಡಂ ತಾಲ್ಲೂಕು	1) ಹಂದರಕಿ 2) ಸಾಲಹಳ್ಳಿ 3) ಮೆದಕ	4) ದುಗನೂರು 5) ತೊಟ್ನಳ್ಳಿ